## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಜಿಎಂ\2191\2017\ಉನಿವಿ–4

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 22/09/2018

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

<u>ವಿಷಯ:</u> ಸರ್ಕಾರಿ ನೌಕರರಾದ ಹಾವೇರಿ ಜಿಲ್ಲೆ ರಾಣೇಬೆನ್ನೂರು ತಾಲ್ಲೂಕ್ 1)ತಹಶೀಲ್ದಾರ್‌ರಾದ ಶ್ರೀ.ರಾಮಮೂರ್ತಿ ಮತ್ತು 2) ಕುರುವತ್ತಿ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿಯಾಗಿದ್ದ ಶ್ರೀ.ಐ.ಹೆಚ್.ಮುಜಾವರ್ [ಪ್ರಸ್ತುತ ನಿವೃತ್ತ] ರವರ ಕರ್ತವ್ಯ ಲೋಪದ ಬಗ್ಗೆ.

**********

ಹಾವೇರಿ ಜಿಲ್ಲೆ ರಾಣೇಬೆನ್ನೂರು ತಾಲ್ಲೂಕ್ ಹುಣಸಿಕಟ್ಟೆ ರಸ್ತೆ ಮೌಂಟ್ ವಿವ್ಯೂ ಶಾಲೆ ಕ್ರಾಸ್‌ನ #36 'ಅಮ್ಮ'ರ ನಿವಾಸಿಯಾದ ಶ್ರೀ.ಜೆ.ಎಂ.ರಾಜಶೇಖರ್ ಬಿನ್ ಜಯದೇವಯ್ಯ ಮಠದ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಹಾವೇರಿ ಜಿಲ್ಲೆ ರಾಣೇಬೆನ್ನೂರು ತಾಲ್ಲೂಕ್ 1) ತಹಶೀಲ್ದಾರ್‌ರಾದ ಶ್ರೀ.ರಾಮಮೂರ್ತಿ 2) ಕುರುವತ್ತಿ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿಯಾಗಿದ್ದ ಶ್ರೀ.ಐ.ಹೆಚ್.ಮುಜಾವರ್ [ಪ್ರಸ್ತುತ ನಿವೃತ್ತ], 3) ಕಂಚಾರಗಟ್ಟಿ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿಯಾಗಿದ್ದ ಆರ್.ಎಫ್.ನಧಾಫ್, ಚೌಡಯ್ಯದಾನಪುರದ ನಿವಾಸಿಗಳಾದ 4) ಶ್ರೀ.ಸಂಕಪ್ಪ ಈರಪ್ಪ ಅರಸಪ್ಪನವರ [ಅರಸನಾಳ] ಮತ್ತು 5)ಶ್ರೀಮತಿ.ಸುವರ್ಣ ಉರುಫ್ ಚಿಕ್ಕಮ್ಮ ಕೋಂ ಸಂಕಪ್ಪ ಅರಸನಾಳ [ಅರಸಪ್ಪನವರ] {4 ಮತ್ತು 5ನೇ ಎದುರುದಾರರುಗಳು ಖಾಸಗಿ ವ್ಯಕ್ತಿಗಳಾಗಿದ್ದಾರೆ} (ಇನ್ನು ಮುಂದೆ '1 ರಿಂದ 5ನೇ ಎದುರುದಾರರು' ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪ ಮತ್ತು ದುರ್ನಡತೆಯ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. ದೂರಿನ ಸಂಕ್ಷಿಪ್ತ ವಿವರಣೆ:– ಒಂದರಿಂದ 3ನೇ ಎದುರುದಾರರಿಗೆ 4 ಮತ್ತು 5ನೇ ಎದುರುದಾರರ ಆಸ್ತಿಗಳ ವಿವರಗಳು ತಿಳಿದಿದ್ದರೂ, ವಸತಿ ರಹಿತರಿಗೆ ಸಲ್ಲಬೇಕಾಗಿದ್ದ ವಸತಿ ಯೋಜನೆಯ ಸೌಲಭ್ಯವನ್ನು ಎದುರುದಾರರುಗಳು ಒಳಸಂಚು ಮಾಡಿಕೊಂಡು 5ನೇ ಎದುರುದಾರರನ್ನು ಸದರಿ ಯೋಜನೆಯ ಫಲಾನುಭವಿಯಾಗಿ ಆಯ್ಕೆ ಮಾಡಿದ್ದಾರೆಂದು ಹೇಳಿದ್ದಾರೆ.

126



3. ದೂರಿನ ಬಗ್ಗೆ 1 ರಿಂದ 3ನೇ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

4ನೇ ಎದುರುದಾರರು ದಿನಾಂಕ:12/11/12ರಂದು ಬಿಪಿಎಲ್ ಪಡಿತರ ಚೀಟಿಯನ್ನು ಪಡೆದುಕೊಂಡಿದ್ದು, ಸದರಿ ಪಡಿತರ ಚೀಟಿಯನ್ನು ದಿನಾಂಕ:16/04/16ರಂದು ಎಪಿಎಲ್ ಪಡಿತರ ಚೀಟಿಯನ್ನಾಗಿ ಪರಿವರ್ತಿಸಿದೆ. ತಪ್ಪು ಮಾಹಿತಿ ನೀಡಿ ಬಿಪಿಎಲ್ ಪಡಿತರ ಚೀಟಿಯನ್ನು ಪಡೆದುಕೊಂಡು ಸರ್ಕಾರದಿಂದ ಸಬ್ಸಿಡಿ ದರದಲ್ಲಿ ಪಡೆದ ಪಡಿತರ ಬಾಬ್ತು ಹಣವನ್ನು ಸರ್ಕಾರಕ್ಕೆ ಭರಣ ಮಾಡಲು ತಿಳಿಸಿದಂತೆ ಸದರಿಯವರು ದಿನಾಂಕ:10/03/17ರಂದು ₹15,000/–ವನ್ನು ಕಟ್ಟಿದ್ದಾರೆ. 5ನೇ ಎದುರುದಾರರ ಹೆಸರಿನಲ್ಲಿ ಬಸವ ವಸತಿ ಯೋಜನೆ ಅಡಿ ಮನೆಯನ್ನು 4ನೇ ಎದುರುದಾರರು 2010–11ನೇ ಸಾಲಿನಲ್ಲಿ ಮಂಜೂರು ಮಾಡಿಸಿಕೊಂಡಿರುವ ಬಗ್ಗೆ ದಿನಾಂಕ:28/02/17ರಂದು ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಣೇಬೆನ್ನೂರು ಹಾಗೂ ಹಾವೇರಿ ರವರು ಚೌಡಯ್ಯದಾನಪುರ ಮತ್ತು ಕಂಚಾರಗಟ್ಟಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಸೂಕ್ತ ಕ್ರಮ ವಹಿಸಲು ತಿಳಿಸಿರುವುದಾಗಿ ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ಕುರುವತ್ತಿ ಗ್ರಾಮ ಪಂಚಾಯತ್‌ನಲ್ಲಿ ತಮ್ಮ ಸೇವಾವಧಿಯಲ್ಲಿ ಸದರಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಚೌಡಯ್ಯದಾನಪುರ ಗ್ರಾಮದ ವಾಸಿಯಾದ 5ನೇ ಎದುರುದಾರರು 2010–11ನೇ ಸಾಲಿನಲ್ಲಿ ಬಸವ ವಸತಿ ಯೋಜನೆ ಅಡಿ ಫಲಾನುಭವಿಯನ್ನಾಗಿ ಗ್ರಾಮಸಭೆಯಲ್ಲಿ ಮುಕ್ತವಾಗಿ ಆಯ್ಕೆ ಮಾಡಿದ್ದು, ಸದರಿಯವರು ಬಡತನ ರೇಖೆಗಿಂತ ಕೆಳಗಿನ ಕುಟುಂಬಕ್ಕೆ ಸೇರಿದ ಬಗ್ಗೆ ರಾಣೇಬೆನ್ನೂರು ತಹಶೀಲ್ದಾರ್‌ರವರು ನೀಡಿದ ಬಿಪಿಎಲ್ ಪಡಿತರ ಚೀಟಿ ಮತ್ತು ನಿವಾಸದ ದೃಢೀಕರಣದ ಬಗ್ಗೆ ಆಧಾರ್ ಕಾರ್ಡ್ ಮತ್ತು ಮತದಾರರ ಗುರುತಿನ ಚೀಟಿಯನ್ನು ಪಡೆಯಲಾಗಿದೆ. ಆದ್ದರಿಂದ, ತಾವು ಯಾವುದೇ ಕರ್ತವ್ಯ ಲೋಪ ಮಾಡಿಲ್ಲವೆಂದು ಹೇಳಿದ್ದಾರೆ.

5. ಮೂರನೇ (3ನೇ) ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

N. Anand

BSM/2191/17



122

6. ಒಂದು ಮತ್ತು 2ನೇ ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

4ನೇ ಎದುರುದಾರರು ಸರ್ಕಾರಕ್ಕೆ ಸುಳ್ಳು ದಾಖಲೆ \ ಮಾಹಿತಿ ನೀಡಿ ಸಬ್ಸಿಡಿ ದರದಲ್ಲಿ ಪಡಿತರ ಪಡೆದ ಬಾಬ್ತು ಕಟ್ಟಿದ ಹಣಕ್ಕೆ ಬಡ್ಡಿ ದರವನ್ನು ವಿಧಿಸಲಿಲ್ಲ. 2010ರಲ್ಲಿ 5ನೇ ಎದುರುದಾರರು 4ನೇ ಎದುರುದಾರರನ್ನು ತಾಲ್ಲೂಕ್ ಪಂಚಾಯತ್ ಚುನಾವಣೆಗೆ ನಿಲ್ಲಿಸಿದ್ದು, ಆ ಸಂದರ್ಭದಲ್ಲಿ ಅವರ ಆಸ್ತಿ ವಿವರವನ್ನು ತಹಶೀಲ್ದಾರರ ಕಛೇರಿಗೆ ಸಲ್ಲಿಸಿದ್ದರು. ಅದನ್ನು ಪರಿಶೀಲನೆ ಮಾಡದೇ, ಸದರಿಯವರಿಗೆ ಬಿಪಿಎಲ್ ಪಡಿತರ ಚೀಟಿಯನ್ನು ನೀಡಿ ಸರ್ಕಾರಕ್ಕೆ ವಂಚನೆ ಮಾಡಿದ ಬಗ್ಗೆ ಸದರಿಯವರ ವಿರುದ್ಧ 1ನೇ ಎದುರುದಾರರು ಕ್ರಿಮಿನಲ್ ಪ್ರಕರಣವನ್ನು ದಾಖಲಿಸದೇ, ಕರ್ತವ್ಯ ಲೋಪ ಎಸಗಿದ್ದಾರೆ. 4 ಮತ್ತು 5ನೇ ಎದುರುದಾರರಿಗೆ ನಿವೇಶನವಿದ್ದ ಬಗ್ಗೆ ಸ್ಥಾನಿಕ ಪರಿಶೀಲನೆ ನಡೆಸದೇ ಹಾಗೂ ದಾಖಲೆಗಳನ್ನು ಪರಿಶೀಲಿಸದೇ, ಸರ್ಕಾರದಿಂದ ವಸತಿ ಯೋಜನೆಯ ಹಣ ಪಡೆಯಲು ಎದುರುದಾರರುಗಳು ಸಹಕರಿಸಿದ್ದಾರೆ. ಸದರಿ ಹಣದಿಂದ ಮನೆ ನಿರ್ಮಾಣ ಮಾಡದೇ, ಸರ್ಕಾರಕ್ಕೆ ವಂಚನೆ ಮಾಡಿದ್ದಾರೆಂದು ಹೇಳಿದ್ದಾರೆ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) 2010–11ನೇ ಸಾಲಿನಲ್ಲಿ 5ನೇ ಎದುರುದಾರರು ರಾಣೇಬೆನ್ನೂರು ತಾಲ್ಲೂಕ್ ಪಂಚಾಯತ್ ಚುನಾವಣೆಯಲ್ಲಿ ಹರನಗಿರಿ ಕ್ಷೇತ್ರದಿಂದ ಸ್ಪರ್ಧಿಸಿದ್ದಾರೆಂದು ದಾಖಲೆಗಳಿಂದ ಕಂಡು ಬಂದಿದೆ. ತಮಗೆ ಅರೆಮಲ್ಲಾಪುರ ಗ್ರಾಮದ ಸರ್ವೆ ನಂ.1 ಮತ್ತು 51ರಲ್ಲಿ 11 ಎಕರೆ ಜಮೀನು ಹಾಗೂ ಚೌಡಯ್ಯದಾನಪುರದಲ್ಲಿ ಮಾಳಗಿ ಮನೆ ಇದೆಯೆಂದು ಘೋಷಿಸಿಕೊಂಡಿದ್ದಾರೆ. ಹಾವೇರಿ ತಾಲ್ಲೂಕ್ ಗುತ್ತಲ ಹೋಬಳಿ ತಿಮ್ಮಾಪುರ ಗ್ರಾಮದಲ್ಲಿ 4ನೇ ಎದುರುದಾರರು ಮತ್ತು ಅವರ ಸಹೋದರರ ಹೆಸರಿನಲ್ಲಿ 6 ಎಕರೆ ಜಮೀನಿದೆಯೆಂದು 2015–16ನೇ ಸಾಲಿನ ಪಹಣಿಯಲ್ಲಿ ಕಂಡು ಬಂದಿದೆ. 4 ಮತ್ತು 5ನೇ ಎದುರುದಾರರ ಹೆಸರಿನಲ್ಲಿ ಜಮೀನು ಮತ್ತು ಮನೆ ಇದ್ದರೂ, 4ನೇ ಎದುರುದಾರರು ದಿ:12/11/12ರಂದು ಬಿಪಿಎಲ್ ಪಡಿತರ ಚೀಟಿ [ಆರ್‌ಬಿಎನ್‌ಆರ್ 00119010] ಯನ್ನು ಪಡೆದುಕೊಂಡಿದ್ದಾರೆ. ಸದರಿ ಪಡಿತರ ಚೀಟಿಯನ್ನು ಅಂದಿನ ಆಹಾರ ನಿರೀಕ್ಷಕರಾದ ಶ್ರೀ.ಜಿ.ಎಸ್.ಶೆಟ್ಟರ್ ರವರ ಮುಖಾಂತರ ಪಡೆದುಕೊಂಡಿರುವುದಾಗಿ 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಹೇಳಿದ್ದಾರೆ. ಸರ್ಕಾರಕ್ಕೆ ಸುಳ್ಳು ದಾಖಲೆ ನೀಡಿ, ಸಬ್ಸಿಡಿ ದರದಲ್ಲಿ ಪಡಿತರವನ್ನು ಪಡೆದುಕೊಂಡ ಬಗ್ಗೆ ದೂರುದಾರರು 1ನೇ ಎದುರುದಾರರಿಗೆ ನೀಡಿದ ದೂರಿನಲ್ಲಿ ವಿಚಾರಣೆ ನಡೆದು, 4ನೇ ಎದುರುದಾರರಿಗೆ ನೀಡಲ್ಪಟ್ಟ ಬಿಪಿಎಲ್ ಪಡಿತರ ಚೀಟಿಯನ್ನು ದಿನಾಂಕ:16/04/16ರಂದು ಎಪಿಎಲ್ ಪಡಿತರ ಚೀಟಿಯನ್ನಾಗಿ ಪರಿವರ್ತಿಸಿದ್ದು, ಡಿಸೆಂಬರ್, 2012 ರಿಂದ ಏಪ್ರಿಲ್, 2016 ರವರೆಗೆ ಸಬ್ಸಿಡಿ ದರದಲ್ಲಿ ಪಡಿತರವನ್ನು ಪಡೆದುಕೊಂಡ ಬಗ್ಗೆ ಸಹಾಯ ಧನದ ಮೊತ್ತವನ್ನು ಸರ್ಕಾರಕ್ಕೆ ಭರಣ

N. Anand

128



ಮಾಡಲು ತಿಳಿಸಿದಂತೆ 4ನೇ ಎದುರುದಾರರು ದಿನಾಂಕ:10/03/13ರಂದು ₹15,000/– ಹಣವನ್ನು ಸರ್ಕಾರಕ್ಕೆ ಕಟ್ಟಿರುವುದು ಕಡತ ಪರಿಶೀಲನೆಯಲ್ಲಿ ಕಂಡು ಬಂದಿದೆ. ಆದರೆ, ಸದರಿ ಮೊತ್ತದ ಮೇಲೆ ಬಡ್ಡಿಯನ್ನು ವಿಧಿಸದೇ ಇರುವುದು ಕಂಡು ಬಂದಿದೆ;

2) ನಾಲ್ಕು ಮತ್ತು 5ನೇ ಎದುರುದಾರರ ಹೆಸರಿನಲ್ಲಿ ಮನೆ \ ನಿವೇಶನ ಹಾಗೂ ಜಮೀನುಗಳಿದ್ದರೂ ಸಹ 2010–11ನೇ ಸಾಲಿನ ಬಸವ ವಸತಿ ಯೋಜನೆ ಅಡಿ 5ನೇ ಎದುರುದಾರರಿಗೆ ಚಿಕ್ಕ ಕುರುವತ್ತಿ ಗ್ರಾಮ ಪಂಚಾಯತ್‌ನಿಂದ ಮನೆ ಮಂಜೂರಾಗಿರುವುದು ಕಂಡು ಬಂದಿದೆ. ದಿನಾಂಕ:18/02/12ರಂದು ನಡೆದ ವಿಶೇಷ ಗ್ರಾಮ ಸಭೆಯಲ್ಲಿ ಸದರಿಯವರನ್ನು ಫಲಾನುಭವಿಯನ್ನಾಗಿ ಆಯ್ಕೆ ಮಾಡಲಾಗಿದ್ದು, ಅವರ ಹೆಸರು ಕ್ರಮ ಸಂಖ್ಯೆ:154ರಲ್ಲಿ ಕಂಡು ಬಂದಿದೆ. ಸದರಿ ಆಯ್ಕೆ ಪಟ್ಟಿಗೆ 2ನೇ ಎದುರುದಾರರು ಮತ್ತು ಗ್ರಾಮ ಪಂಚಾಯತ್ ಅಧ್ಯಕ್ಷರು ಸಹಿ ಮಾಡಿದ್ದಾರೆ. 5ನೇ ಎದುರುದಾರರಿಗೆ ವಾಸದ ಮನೆ ಇಲ್ಲವೆಂದು 2ನೇ ಎದುರುದಾರರು ದಿನಾಂಕ:04/09/12ರಂದು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಪ್ರಮಾಣ ಪತ್ರವನ್ನು ಕೂಡ ಸಲ್ಲಿಸಿರುವುದು ದಾಖಲೆಗಳಲ್ಲಿ ಕಂಡು ಬಂದಿದೆ. 5ನೇ ಎದುರುದಾರರ ಫಲಾನುಭವಿ ಕೋಡ್ ಸಂಖ್ಯೆ:128135 ಆಗಿದ್ದು, ಫಲಾನುಭವಿಗಳ ವಿವರ [ನಮೂನೆ–17]ವನ್ನು 2ನೇ ಎದುರುದಾರರು ಮತ್ತು ಗ್ರಾಮ ಪಂಚಾಯತ್ ಅಧ್ಯಕ್ಷರು ದೃಢೀಕರಿಸಿದ್ದಾರೆ. ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ 5ನೇ ಎದುರುದಾರರಿಗೆ ಸಹಾಯ ಧನವು ಕೂಡ ಮಂಜೂರಾಗಿದೆ;

3) ಸರ್ಕಾರಕ್ಕೆ ಸುಳ್ಳು ಮಾಹಿತಿ ನೀಡಿ, ಬಿಪಿಎಲ್ ಪಡಿತರ ಚೀಟಿ ಪಡೆದ ಬಗ್ಗೆ 4ನೇ ಎದುರುದಾರರ ವಿರುದ್ಧ 1ನೇ ಎದುರುದಾರರು ಕ್ರಿಮಿನಲ್ ಮೊಕದ್ದಮೆ ದಾಖಲಿಸದೇ ಇರುವುದು ಕಂಡು ಬಂದಿದೆ. ಮುಂದುವರೆದು, ಸುಳ್ಳು ಮಾಹಿತಿ ನೀಡಿ, ಬಸವ ವಸತಿ ಯೋಜನೆ ಅಡಿ 5ನೇ ಎದುರುದಾರರು ಮನೆ ಮಂಜೂರು ಮಾಡಿಸಿಕೊಂಡು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಧನ ಸಹಾಯ ಪಡೆದ ಬಗ್ಗೆಯೂ ಸದರಿಯವರ ವಿರುದ್ಧ ಯಾವುದೇ ಕ್ರಮ ಜರುಗಿಸದೇ ಇರುವುದು ಕಂಡು ಬಂದಿದೆ. 5ನೇ ಎದುರುದಾರರನ್ನು ಫಲಾನುಭವಿಯೆಂದು ಗುರುತಿಸುವ ಸಮಯಕ್ಕೆ 2ನೇ ಎದುರುದಾರರು ಚಿಕ್ಕ ಕುರುವತ್ತಿ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯದರ್ಶಿ \ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದು, 5ನೇ ಎದುರುದಾರರನ್ನು ಫಲಾನುಭವಿಯೆಂದು ಗುರುತಿಸುವ ಮೊದಲು ದಾಖಲೆಗಳ ಪರಿಶೀಲನೆ ಹಾಗು ವಿಚಾರಣೆಯನ್ನು 2ನೇ ಎದುರುದಾರರು ಮಾಡದೇ ಇರುವುದು ಕಂಡು ಬಂದಿದೆ.

8. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1 ಮತ್ತು 2ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

N. Anand

BGM/2191/17



1299

9. ಮೂರನೇ (3ನೇ) ಎದುರುದಾರರ ಕರ್ತವ್ಯ ಲೋಪ ಕಂಡು ಬರುವುದಿಲ್ಲವಾದ್ದರಿಂದ, ಅವರ ವಿರುದ್ಧದ ನಡವಳಿಯನ್ನು ಕೈಬಿಡಲಾಗಿದೆ. 4 ಮತ್ತು 5ನೇ ಎದುರುದಾರರು ಖಾಸಗಿ ವ್ಯಕ್ತಿಗಳಾಗಿರುವುದರಿಂದ, ಸದರಿಯವರುಗಳ ವಿರುದ್ಧದ ನಡವಳಿಯನ್ನು ಕೈಬಿಡಲಾಗಿದೆ.

10. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ಮತ್ತು 2ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

11. ಅದಲ್ಲದೆ 1 ಮತ್ತು 2ನೇ ಎದುರದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 2ನೇ ಎದುರುದಾರರು ದಿನಾಂಕ:30/04/2017ರಂದು ನಿವೃತ್ತಿ ಹೊಂದಿರುವುದರಿಂದ, **ಕೆಸಿಎಸ್‌ಆರ್ ನಿಯಮ** 214(2)(ಬಿ)(i)ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಹಾಗೂ 1 ಮತ್ತು 2ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

12. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 2ನೇ ಎದುರುದಾರರು ದಿನಾಂಕ: 30/04/2017ರಂದು ನಿವೃತ್ತಿ ಹೊಂದಿರುತ್ತಾರೆ.

N. Anand 22/9

(ನ್ಯಾಯಾಮೂರ್ತಿ ಎನ್.ಆನಂದ)
ಉಪಲೋಕಾಯುಕ್ತ,
ಕರ್ನಾಟಕ ರಾಜ್ಯ.